ಆಕ್ಷೇಪಣೆಯೋ, ಒಪ್ಪಿಟ್ಟುಕೊಳ್ಳುವಿಕೆಯೋ ಅಥವಾ ಉದ್ದೇಶ ಇಲ್ಲದ ಒಂದು ಪ್ರತಿಕ್ರಿಯೆಯೇ?

ಅವನು ನಿಂತಲ್ಲಿಗೇ ಬಂದಿತ್ತು ಕಾಫಿ. ರಾಮಚಂದ್ರ ಕಾಫಿ ಕುಡಿದು ಲೋಟ ಕೈಗೆ ಕೊಡುವವರೆಗೆ ಅಲ್ಲೇ ನಿಂತಿದ್ದರು ಅತ್ತೆ. ಏನಂತದೋ ಮುಜುಗರ. ಅವರು ಕೋಣೆಯಿಂದಾಚೆ ಹೋಗುತ್ತಿದ್ದಂತೆ ಧಾವಿಸಿ ಮಡದಿಯ ಪಕ್ಕ ಕೂತು ಅವಳ ಸೆರಗಿನ ಮರೆಯಲ್ಲಿದ್ದ ಮಗನ ಮುಖ ನೋಡುವ ಸಡಗರದಲ್ಲಿ ಅವಳ ಸೆರಗು ಸರಿಸಿದ್ದ. ಬೆಳಕಿಗೆ ಕಣ್ಣು ಪಿಳುಕಿಸುತ್ತಾ ಬೊಚ್ಚು ಬಾಯಿ ಅರಳಿಸಿ ನಕ್ಕಿತ್ತು ಕಂದ. ರಾಮಚಂದ್ರನ ಮುಖ ಅರಳಿ ಹೋಗಿತ್ತು.

ಎರಡೇ ತಿಂಗಳಲ್ಲಿ ಎಷ್ಟು ದೊಡ್ಡ ಆಗಿದಾನಲ್ಲೇ, ಥೇಟ್ ನಿನ್ನ ಹಂಗೇ ಕಾಣ್ತಾನೆ..

ಮತ್ತೆ? ಹೆಂಗಿದ್ದಿ ನೀನು?

ನಂಗೇನು ಧಾಡಿ? ಆರಾಮಾಗಿದೀನಿ.. ಮುಗುಮ್ಮಾಗಿ ಬಂದಿತ್ತು ಉತ್ತರ.

ಒಂಥರಾ ಇದೀಯಲ್ಲ? ಈ ಬಡಪಾಯಿ ಮರ್ತೇ ಹೋಗಿದ್ನಾ ಅಂತ? ಒಂದು ಫೋನ್ ಮಾಡಿ ಮಾತಾಡೋಕೂ ಮನಸ್ಸು ಬರ್ತಿರ್ಲಿಲ್ಲ ನಿಂಗೆ..

ಫೋನ್ ಮಾಡಿ ಮಾತಾಡೋಕೆ ಏನಂತದಿರುತ್ತೆ? ನಿಮ್ಮ ಗೋಳು ನಿಮ್ಗೆ..

ಗಂಡ, ಹೆಂಡತಿ ಪರಸ್ಪರ ಮುಖ ನೋಡಿಕೊಂಡಿದ್ದರು. ನೋಡು, ನಮ್ಮನೆ ಪರಿಸ್ಥಿತಿ ಎಲ್ಲಿಗೆ ಬಂದು ಮುಟ್ಟು ಅನ್ನುವ ಹಾಗೆ ಕಣ್ಣಲ್ಲಿ ನೀರಿನ ತೆಳು ಪೊರೆ ಆವರಿಸಿದ್ದಂತೆ ಚಪ್ಪೆ ನಗು ನಕ್ಕಿದ್ದ ರಾಮಚಂದ್ರ. ಅವಳೊಮ್ಮೆ ಅವನ ತಲೆಯ ಮೇಲೆ ಕೈಯಾಡಿಸಿ, ಮುಖವನ್ನು ಎದೆಗಪ್ಪಿಕೊಂಡು ಸಂತೈಸಿದ್ದರೆ ಒಳಗಿನ ಸಂಕಟವೆಲ್ಲಾ ಕೊಚ್ಚಿ ಹೋಗುವಂತೆ ಅವಳ ಮಡಿಲಲ್ಲಿ ಮುಖವಿಟ್ಟು ಅಳಬಹುದಿತ್ತು ಎನ್ನುವ ಭಾವ ಒಳಗಿನಿಂದ ಪುಟಿದೆದ್ದಿತ್ತು. ಮಂಚದ ಮೇಲೆ ಕೂತಿದ್ದ ನಾಗಶ್ರೀ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ತೂಗತೊಡಗಿದಳು. ಅವಳ ಮೈ ಶಾಖ ತಗುಲುವಷ್ಟು ಹತ್ತಿರದಲ್ಲಿ ಕೂತಿದ್ದ ರಾಮಚಂದ್ರ ಮಗುವಿನ ಕಟವಾಯಿಯಿಂದ ಹಾಲಿನ ಕಿರುಧಾರೆಯೊಂದು ಕೆಳಗಿಳಿಯುತ್ತಿದ್ದುದನ್ನು ಕಂಡು ತೋರು ಬೆರಳಿಂದ ಅದನ್ನು ವರೆಸಿದ. ಕಣ್ಣು ಬಾಡುತ್ತಿರುವ ಮಗು ತುಟಿಯರಳಿಸಿ ನಕ್ಕಿತು. ದೇವರು ಬೇಕೆಂದೇ ಕೀಟಲೆ ಮಾಡುತ್ತಾನಂತೆ. ಅದೂ ಎಂತಾ ಕೀಟಲೆ? ನಿನ್ನಮ್ಮ ಸತ್ಹೋದ್ಲು ಅಂತಾನಂತೆ ದೇವರು.

ಸುಳ್ಳೇ, ಈಗಿನ್ನೂ ಹಾಲು ಕುಡಿದಿದೀನಿ ಎನ್ನುತ್ತಾ ನಗುತ್ತದೆಯಂತೆ ಮಗು.

ಮತ್ತೆ? ಮುಗೀಲಿಲ್ವಾ ಬಾಣಂತನ? ಹಾಗೆ ಕೇಳಬೇಕಾದ್ದೇನಿರಲಿಲ್ಲ ರಾಮಚಂದ್ರ. ಹೊಟ್ಟೆ ಚಟ್ಟಲು ಬಿಗಿದ ಸುತ್ತಿನ ಸೀರೆ ಬಿಚ್ಚಿರಲಿಲ್ಲ ನಾಗಶ್ರೀ. ಕಿವಿಗೆ ಗಾಳಿ ಹೋಗಿ ಕೆಪ್ಪಾಗಬಾರದೆಂದು ಕಿವಿ ಮುಚ್ಚುವಂತೆ ತಲೆಗೆ ಸುತ್ತಿಕೊಂಡ ಮಫ್ಲರ್ ತೆಗೆದಿರಲಿಲ್ಲ.

ನಿನ್ನ ಬಾಣಂತನಕ್ಕೆ ಕಳಿಸ್ಬೇಕಾರೆ ನಗ್ ನಗ್ತಾ ಕಳಿಸಿಕೊಟ್ಟಿದ್ನಲ್ಲೇ ಅಣ್ಣ? ಹಿಂಗಾಗುತ್ತೇಂತ ಕನಸಿನಲ್ಲಾದ್ರೂ ಎಣಿಸಿಕೊಂಡಿದ್ನಾ? ಎಲ್ಲಿಂದ ಎಲ್ಲಿಗೋ ಜಿಗಿಯಿತು ರಾಮಚಂದ್ರನ ಮಾತು. ಅವನ ತಲೆ ತುಂಬಾ ಗಿರಿಗಿಟ್ಟೆ ಹೊಡೆಯುತ್ತಿದ್ದ ಸಂಗತಿ ಮಾತಾಗಿ ಹೊರ ಬಂದು ಮಡದಿಯ ಸಹಾನುಭೂತಿಯ ಪ್ರತಿಕ್ರಿಯೆಗೆ ಕಿವಿಯಾಗಿ ಕೂತಿತು.

ಏನ್ಮಾಡೋಕಾಗುತ್ತೆ ಹೇಳಿ? ಪಡ್ಕೊಂಬಂದಿದ್ದು.. ಸಾಂತ್ವನದ ಇನ್ನಷ್ಟು ಮಾತಾಡಬಹುದಿತ್ತು ತನ್ನ ಮುದ್ದಿನ ಮಡದಿ ಎನ್ನುವ ನಿರೀಕ್ಷೆಯಲ್ಲಿ ಅವನು ಕಾದು ಕೂತಿದ್ದರೆ ಹೇಳಿದ್ದಳು ನಾಗಶ್ರೀ,

ಏನೇ ಹೇಳಿ ನೀವು, ಭಾವಂಗೆ ಅವಸರ ಜಾಸ್ತಿ. ಬಸ್ಸು ಪೂರ್ತಿ ನಿಲ್ಲೋಕೆ ಮುಂಚೆ ಇಳಿಯೋಕೆ ಹೋಗಿದ್ದೆಂತಕ್ಕೆ? ಅಷ್ಟೂ ಗೊತ್ತಾಗ್ಬಾರ್ದಾ?

ಅಕ್ಕ ಪಾಲು ತಗಂಡು ಹೊರಟು ಬಿಟ್ರಂತೆ. ಅವರು ಕೇಳಿದ್ರು ಅಂದ್ಕೂಡ್ಲೆ ಸಲೀಸಾಗಿ ಕೊಟ್ಟು ಕಳಿಸಿಬಿಡೋದಾ? ನಮ್ಮಪ್ಪನ್ನ ಒಂದು ಮಾತು ಕೇಳ್ಬೋದಿತ್ತು. ಹಿರೀರು ಅಂತ ಸಲಹೆ ಕೊಡ್ತಿದ್ರು..

ಬೆಚ್ಚಿ ಬಿದ್ದ ರಾಮಚಂದ್ರ. ಅಣ್ಣ ಸತ್ತಿದ್ದಕ್ಕಿಂತಾ ಅತ್ತಿಗೆಗೆ ನ್ಯಾಯವಾಗಿ ಸಲ್ಲಬೇಕಾದ ಪಾಲು ಕೊಟ್ಟು ಕಳಿಸಿದ್ದು ದೊಡ್ಡ ವಿಷಯವಾಗಿಬಿಟ್ಟಿತಾ? ಸಾವಿನಲ್ಲೂ ಮನುಷ್ಯ ಲೆಕ್ಕಾಚಾರ ಹಾಕುತ್ತಾನೆಂದರೆ ಏನೆನ್ನಬೇಕು? ಸಾವಿನಲ್ಲೇ ಲೆಕ್ಕಾಚಾರದ ಆರಂಭ ಅನ್ನುವುದು ಮುಗ್ಧನಿಗೆ ತಿಳಿದಿರಲಿಲ್ಲ. ಸತ್ತ ಮನುಷ್ಯನಿಂದ ತನಗೇನು ಗಿಟ್ಟುತ್ತದೆ ಎನ್ನುವುದೇ ಮೊದಲಿಗೆ ಮನಸ್ಸಿಗೆ ಬರುವ ವಿಷಯ, ತೀರಾ ಕರುಳ ಸಂಬಂಧ ಅಲ್ಲದವರಿಗೆ.

ಯಾವತ್ತಾರೂ ಕೊಟ್ಟು ಕಳಿಸೋದೇ ಅಲ್ಲೇನೇ? ಅಕೋ ಕೊಟ್ಟೆ, ಇಕೋ ಕೊಟ್ಟೆ ಅಂತ ತಾರಮ್ಮಯ್ಯ ಮಾಡ್ತಿದ್ರೆ ಕೊಡೋದು ತಪ್ಪುತ್ತಾ?

ಹಂಗಲ್ಲ ಕಣ್ರೀ. ನಿಮಗೆ ಬೇಕಾದೋರು ಅಂತ ಒಬ್ರನ್ನ ಪಂಚಾತಿಕೆಗೆ ಕೂರಿಸ್ಕೋಬೇಕೋ, ಬ್ಯಾಡ್ವೋ? ಒಂದಿಷ್ಟು ಚೌಕಾಶೀನಾರೂ ಮಾಡ್ತಿದ್ರು. ಏನೂ ಸಂಬಂಧ ಇಲ್ದಿದ್ರೂ ನಿಮ್ಮತ್ತಿಗೆ ಮನೆಯೋರಿಗೆ ಬಂಪರ್ ಲಾಟ್ರಿ ಹೊಡೆದ್ಹಂಗಾಯ್ತು..

ಅವಳು ಅತ್ತಿಗೆಯ ಹೆತ್ತವರ ಕುರಿತು ಮಾತನಾಡುತ್ತಿದ್ದಾಳೆಂದು ಅರ್ಥವಾಯ್ತು ರಾಮಚಂದ್ರನಿಗೆ. ದುಡಿದಿಟ್ಟಿದ್ದು ಯಾರೋ, ಅನುಭವಿಸೋದು ಮತ್ಯಾರೋ ಅನ್ನೋ ಹಂಗಾಯ್ತು ಮತ್ತೆ ಒತ್ತು ಕೊಟ್ಟು ಹೇಳಿದಳು ನಾಗಶ್ರೀ.

ಅದಕ್ಕೆ ನಾವೇನ್ಮಾಡೋಕಾಗುತ್ತೆ? ಪಾಲು ಕೊಡಲ್ಲ ಅಂತ ಹಟ ಹಿಡಿಯೋಕಾಗ್ತಿತ್ತಾ? ನ್ಯಾಯವಾಗಿ..

ಏನೋ, ನೀವು ಮಾಡಿದ್ದು ಸಮ ಆಗ್ಲಿಲ್ಲ.. ಅವನ ಮಾತನ್ನು ಪೂರ್ಣಗೊಳಿಸಲು ಬಿಡದೆ ಹೇಳಿದಳು ನಾಗಶ್ರೀ.

ಮನಸ್ಸನ್ನು ಘಾತಿಸಿ ಕಾಡಬೇಕಾದ ಒಂದು ತುಂಬು ಜೀವದ ಸಾವಿನ ವಿಷಯ ಬದಿಗೆ ಒತ್ತಲ್ಪಟ್ಟು ಹಣಕಾಸಿನ ವಿಷಯ ಪ್ರಾಮುಖ್ಯತೆ ಪಡೆದಿದ್ದರ ಕುರಿತು ರಾಮಚಂದ್ರನಿಗೆ ದಿಗ್ಭ್ರಮೆಯಾಯ್ತು. ಅಣ್ಣನ ಅಪಮೃತ್ಯು ತನ್ನನ್ನು, ತನ್ನಮ್ಮನನ್ನು ಕಾಡಿ ಕಂಗೆಡಿಸಿದಷ್ಟು ತನ್ನ ಮಡದಿಯನ್ನು, ಅವಳ ಮನೆಯವರನ್ನು ಕಾಡುತ್ತಿಲ್ಲ ಎನ್ನುವುದನ್ನು ಮೊದಲ ಬಾರಿಗೆ ಅರ್ಥ ಮಾಡಿಕೊಂಡ ರಾಮಚಂದ್ರ ಬೆಪ್ಪು ಕಟ್ಟಿ ಕೂತ. ಇಂತಾ ವರ್ತನೆ ಸಹಜ ಕೂಡಾ ಅನಿಸಿತು. ಒಂದೇ ರಕ್ತ ಹಂಚಿಕೊಂಡು ಹುಟ್ಟಿದ ತಮ್ಮಿಬ್ಬರಿಗೆ ಇರುವ ಬಾಂಧವ್ಯ ಹೊರಗಿನವಳಾದ ಈಕೆಗೆ ಹೇಗಿರಲು ಸಾಧ್ಯ? ಅವರವರ ದುಃಖ ಅವರವರದ್ದೇ ವಿನಾ ಮೂರನೆಯವರೊಬ್ಬರು ಅದರಲ್ಲಿ ಪಾಲುದಾರರಾಗುತ್ತಾರೆಂದರೆ ಅದು ತುದಿನಾಲಿಗೆಯಲ್ಲಷ್ಟೇ ಎನ್ನುವುದು ಒಪ್ಪಬೇಕಾದ ಸತ್ಯವಾದರೆ ಸಂಬಂಧಗಳಿಗೆ ಏನರ್ಥ? ರಾಮಚಂದ್ರ ಅವನತಮುಖಿಯಾಗಿ ಕೂತುಕೊಂಡ. ನಾಗಶ್ರೀ ಬದಿಯಲ್ಲಿದ್ದ ಅವನ ಬಲಗೈಯನ್ನು ಮುಷ್ಠಿಯಲ್ಲಿ ಹಿಡಿದು ಅಮುಕಿದಳು.

ಮಕಕ್ಕೆ ಹೊಡೆದ ಹಂಗೆ ಮಾತಾಡ್ತೀನಿ ಅಂತ ಬೇಜಾರಾಯ್ತನ್ರೀ? ಹೋದೋರು ಹೋದ್ರು. ಇರೋರು ಅವರ ಹಿಂದೆ ಹೋಗೋಕಾಗುತ್ತಾ? ಇಲ್ಲಿದ್ದೇ ಬದುಕು ಮಾಡ್ಬೇಕು ತಾನೇ? ನೋಡಿ, ನಿಮ್ಮತ್ತಿಗೆ ಹೆಂಗೆ ಜಾರಿಕೊಂಡುಬಿಟ್ರು ಅಂತ. ಇನ್ಮುಂದೆ ಅವರಿಂದ ಮೂರು ಕಾಸಿನ ಉಪಯೋಗ ನಿಮಗೆ ಆಗಲ್ಲ, ಬರೆದಿಟ್ಕೊಳಿ. ಆದ್ರೂ ದೊಡ್ಡ ಗಂಟು ಹೊಡ್ಕಂಡ್ಹೋದ್ರಲ್ಲ, ಹೊಟ್ಟೆ ಉರಿಯಲ್ವಾ ನಿಮ್ಗೆ?

ಬೇರೆ ಏನಾರೂ ಮಾತಾಡೇ. ಜಗಿದದ್ದೇ ಜಗೀಬೇಡ.. ರಾಮಚಂದ್ರ ಸೋತ ದನಿಯಲ್ಲಿ ಹೇಳಿದ.

ಬೇರೆ ಏನು ಮಾತಾಡ್ಲಿ? ಹತ್ರುಪಾಯಿ ಕೈಯೆತ್ತಿ ಕೊಡ್ಬೇಕಾರೆ ಜನ ಹಿಂದೆಮುಂದೆ ನೋಡ್ತಾರೆ. ಅಂತಾದ್ರಲ್ಲಿ ನೀವು ಲಕ್ಷಗಟ್ಲೆ ಸಲೀಸಾಗಿ ಕೊಟ್ಟು ಕೈ ಮುಗಿದ್ರಿ ಅಂದ್ರೆ ಏನರ್ಥ? ಮತ್ತೆ ದುಡ್ಡಿನದೇ ವಿಷಯ. ಹೇಳುತ್ತಿದ್ದಾಳೆ ನಾಗಶ್ರೀ, ಬಿಸಿಬಿಸೀಲಾದ್ರೆ ಕನಿಕರ ಕೆಲಸ ಮಾಡ್ತಿರುತ್ತೆ ಅಂತ ಅವ್ರಿಗೆ ಗೊತ್ತುಂಟು. ಬುದ್ಧಿವಂತ್ರು. ನಿಮ್ಮ ಹಲ್ಲು ಲಾಯ್ಕು ಲೆಕ್ಕ ಮಾಡ್ಕಂಡಿದಾರೆ..

ನಾನು ಏನು ಮಾಡ್ಬೇಕಿತ್ತು ಅಂತಿ? ಸತ್ಯ, ನ್ಯಾಯ ಅನ್ನೋದನ್ನ ಬಿಟ್ಟು ನಡೀಬೇಕಿತ್ತಾ?

ಅಷ್ಟು ಅವಸರವಸರ ಮಾಡೋಕೆ ಏನಿತ್ತು ಅಂತ? ಕೊನೇಪಕ್ಷ ನಮ್ಮಪ್ಪನ್ನ..

ಸಣ್ಣಗೆ ಕೆರಳತೊಡಗಿದ ರಾಮಚಂದ್ರ. ತನ್ನ ಹಿರೀಕರು ಮಾಡಿಟ್ಟು ಹೋಗಿದ್ದ ಆಸ್ತಿ. ಕೊಡಬೇಕಾದ್ದಕ್ಕಿಂತಾ ಹೆಚ್ಚಿಗೆ ತಾನೇನು ಕೊಟ್ಟಿಲ್ಲ. ನ್ಯಾಯವಾಗಿ ಜಮೀನಿಗೆ ಏನು ರೇಟಿದೆ ಎನ್ನುವುದನ್ನು ತಲಾಷು ತೆಗೆದೇ ವ್ಯವಹಾರ ಮಾಡಿದ್ದು. ಇಷ್ಟಕ್ಕೂ ಸ್ವಲ್ಪ ಹೆಚ್ಚೇ ಕೊಟ್ಟಿದೀನಿ ಅಂದುಕೊಂಡರೂ ಪ್ರಪಂಚ ಮುಳುಗಿ ಹೋಗುತ್ತಾ? ಯಾರಿಗೆ ಕೊಟ್ಟಿದ್ದು? ತನ್ನಣ್ಣನ ಮಗನಿಗೆ. ತನ್ನನ್ನು ಪ್ರಾಣಕ್ಕಿಂತಾ ಹೆಚ್ಚು ಪ್ರೀತಿಸುತ್ತಿದ್ದ ಅಪ್ಪನನ್ನು ಶಾಶ್ವತವಾಗಿ ಕಳೆದುಕೊಂಡಿದ್ದೇನೆ ಎನ್ನುವ ಸತ್ಯ ಗೊತ್ತೇ ಆಗಿರದ ಅನಾಥ ಬಾಲಸಿಗೆ. ತನ್ನ ದೃಷ್ಟಿಯಲ್ಲಿದ್ದಿದ್ದು ಅವನೇ ವಿನಾ ಅತ್ತಿಗೆಯಲ್ಲ. ಜೇನುತುಪ್ಪ ಅಳೆಯುವವರು ಕೈ ನೆಕ್ಕಿಕೊಳ್ಳದೆ ಇರುತ್ತಾರೆಯೇ? ಅನ್ನುವಂತೆ ನಡುವಿನವರಿಗೆ ಒಂದಿಷ್ಟು ಲಾಭ ಆಗಬಹುದು. ಆದರೆ ಅವರಿಂದ ಒಂದು ರಕ್ಷಣೆ ಸಿಗುವುದು ಸತ್ಯವಲ್ಲವೇ? ಅದಕ್ಕೋಸ್ಕರ